

# ನಾನೇನೂ ಸಂಬಂಧ ಬೆಳೆಸಲು ಹೋಗಿರಲಿಲ್ಲ

## ರೂಪೇಶ್ ರಾಜಣ್ಣ

**ಕಲರ್ಸ್ ಕನ್ನಡ 'ಬಿಗ್‌ಬಾಸ್' ಸ್ಪರ್ಧಿ**

◆ **ಸಂಘಟಕ–ಚಳವಳಿಗಾರ–ಸೆಲೆಬ್ರಿಟಿ ಈ ಮೂರರಲ್ಲಿ ನೀವು ಎಲ್ಲಿ ನಿಲ್ಲ ಬಯಸುತ್ತೀರಿ?**

ಹಿಂದೆ ಕೆಲವೊಂದು ಸಿನಿಮಾ ಮತ್ತು ಧಾರಾವಾಹಿಗಳಲ್ಲಿ ಅಭಿನಯ ಮಾಡಿದ್ದೆ. ನಟನೆ ಕಲಿಯಲು ತರಬೇತಿಯನ್ನು ತೆಗೆದುಕೊಂಡಿಲ್ಲ. ಕನ್ನಡ ಪರ ಹೋರಾಟವೇ ನನಗೆ ಬಹಳ ಮುಖ್ಯ ಅನ್ನಿಸುತ್ತದೆ. ಸಾಮಾಜಿಕ ಮಾಧ್ಯಮ ಫೇಸ್‌ಬುಕ್ ಮೂಲಕವೂ ನನ್ನ ಆ ಕೆಲಸವನ್ನು ಜನ ಗಮನಿಸಿದ್ದಾರೆ. ಅದರಿಂದ ಸೀಮಿತ ವಲಯದಲ್ಲಿ ಚಿರಪರಿಚಿತ ಹೋರಾಟಗಾರ. ಸೆಲೆಬ್ರಿಟಿ ಅನ್ನುವುದಕ್ಕಿಂತ ಹೇಗೆ ಒಬ್ಬ ಹೋರಾಟಗಾರ ಆಗಿದ್ದೆನೋ ಹಾಗೆಯೇ ಇರಲು ಬಯಸುತ್ತೇನೆ. ಈಗ ಇನ್ನೂ ಹೆಚ್ಚು ಜನರಿಗೆ ತಲುಪಿದ್ದೇನೆ. ನನ್ನ ಪರಿಚಯದ ಜೊತೆಗೆ ರೂಪೇಶ್ ರಾಜಣ್ಣ ವ್ಯಕ್ತಿಯಾಗಿ ಹೇಗೆ ಎನ್ನುವುದು ಗೊತ್ತಾಯಿತು.

◆ **ಸಮುದಾಯದ ನಡುವೆ ಇದ್ದವರು. 'ಬಿಗ್‌ಬಾಸ್' ಮನೆಯೊಳಗೆ ಚಿಪ್ಪಿನೊಳಗಿನ ಮುತ್ತಿನಂತೆ ಆಗಿಬಿಟ್ರ ಅನ್ನಿಸುತ್ತೆ.**

ಜನರ ಜೊತೆ ಇದ್ದರೂ ನನ್ನ ವೈಯಕ್ತಿಕ ಸ್ವಭಾವ ಸಾಕಷ್ಟು ಜನರಿಗೆ ಗೊತ್ತಿರಲಿಲ್ಲ. ನನ್ನ ಹತ್ತಿರ ಇದ್ದವರಿಗೆ ಮಾತ್ರ ಅದು ಗೊತ್ತಿತ್ತು. ಮೂಲತಃ ಹೊರಗೊಂದು ಒಳಗೊಂದು ಗೊತ್ತಿಲ್ಲ. ಹೊರಗಡೆ ಹೇಗೆಯೋ ಆ ಮನೆ ಒಳಗಡೆ ಕೂಡ ಹಾಗೆ ಇದ್ದೆ. ಈ ರೀತಿಯೇ ರಾಜಣ್ಣ ಇದ್ದಾನೆ ಎನ್ನುವುದು ಗೊತ್ತಾಯಿತು. ವ್ಯಕ್ತಿಯಾಗಿ ಹೇಗೆ ಎನ್ನುವುದನ್ನು ಅನೇಕರು ಮಿಸ್ ಮಾಡಿಕೊಂಡಿದ್ದರು ಈಗ ಅವರಿಗೂ ಗೊತ್ತಾಯಿತು.

◆ **ನಿಮ್ಮಲ್ಲಿರುವ ಕಲಾವಿದನ ಪೋಷಣೆ ಮಾಡುತ್ತೀರೋ ಹೇಗೆ?**

ಕನ್ನಡದ ಹೋರಾಟಕ್ಕೆ ಮೊದಲ ಆದ್ಯತೆ ನೀಡುವೆ. ನೆಲ–ಜಲದ ಸಮಸ್ಯೆ, ಕನ್ನಡಿಗರ ಉದ್ಯೋಗ ವಿಷಯ ನನ್ನ ಮೊದಲ ಆಯ್ಕೆ. ನಟನೆಗೆ ಒಂದಿಷ್ಟು ಅವಕಾಶಗಳು ಸಿಗಬಹುದು. ಆಗ ಒಬ್ಬ ಕಲಾವಿದನನ್ನು ಜೀವಂತವಾಗಿ ಇಟ್ಟುಕೊಂಡು ನನ್ನ ಕೆಲಸವನ್ನು ಮುಂದುವರಿಸುತ್ತೇನೆ. ಬಾಲ್ಯದಿಂದಲೂ ಹಾಡುತ್ತೇನೆ, ಸಂಗೀತ ಕಲಿತಿಲ್ಲ. ಮಿಮಿಕ್ರಿ ಮಾಡುತ್ತೇನೆ. ಕಾಲೇಜು ದಿನಗಳಲ್ಲಿ ಏಕಪಾತ್ರಾಭಿನಯ–ರೂಪಕಗಳನ್ನು ಮಾಡುತ್ತಿದ್ದೆ. ಇವೆಲ್ಲವನ್ನು ತೋರಿಸಲು ಉತ್ತಮ ವೇದಿಕೆ 'ಬಿಗ್‌ಬಾಸ್' ಮನೆ ಆಯ್ತು. ಈ ಟೀವಿ ಕನ್ನಡದಲ್ಲಿ 'ಗಾಳಿಪಟ', ಉದಯದ 'ತಂಗಾಳಿ' ಸೇರಿ ಕೆಲವು ಧಾರಾವಾಹಿಗಳಲ್ಲಿ ನಟಿಸಿದ್ದೇನೆ. ಇತ್ತೀಚೆಗೆ ಒಂದೆರಡು ಸಿನಿಮಾದಲ್ಲಿ ಕನ್ನಡಪರ ಹೋರಾಟಗಾರನ ಪಾತ್ರವನ್ನೇ ನಿರ್ವಹಿಸಿದ್ದೇನೆ.

◆ **ಸ್ಪರ್ಧಿಯಾಗಿ ಅಲ್ಲಿನ ಜೀವನ ಮತ್ತು ಗುಂಪುಗಾರಿಕೆಯನ್ನು ಹೇಗೆ ಗ್ರಹಿಸಿದ್ದೀರಿ?**

ಬಂದವರೆಲ್ಲ ಬಹುತೇಕ ಕಲಾವಿದರು. ನಾನು ಭಿನ್ನ ವರ್ಗದ ಪ್ರತಿನಿಧಿ. ಹೋರಾಟಗಾರನಾಗಿದ್ದ ನನಗೆ ಈ ಕಾರ್ಯಕ್ರಮದ ಆಳ ಗೊತ್ತಿರಲಿಲ್ಲ. ಸಾದಾ ಸೀದಾ ವ್ಯಕ್ತಿಯಾಗಿ ಮಾತ್ರ ಹೋಗಿದ್ದೆ. ಹೋಗುವಾಗ ಯಾವುದೇ ಸಂಬಂಧ ಬೆಳೆಸಲು ಹೋಗಿರಲಿಲ್ಲ. ಎಲ್ಲರನ್ನೂ ಸ್ಪರ್ಧಿ ಎಂದೇ ಆಯ್ಕೆ ಮಾಡಿರುತ್ತಾರೆ. ನಮ್ಮ ಆಟದ ನಡುವೆ ನಮ್ಮ ವ್ಯಕ್ತಿತ್ವದ ಮೇಲೆ ಸಂಬಂಧಗಳು ಬೆಸೆದುಕೊಳ್ಳುತ್ತವೆ. ಒಳಗಡೆ ಏನಾಗುತ್ತಿದೆ ಹೊರಗಡೆ ಏನಾಗಿದೆ ಎನ್ನುವುದು ಗೊತ್ತಾಗುವುದಿಲ್ಲ. ನಾನು ಒಂದು ಕಡೆ ಇದ್ದರೆ, ಮತ್ತೊಂದು ಕಡೆ ನನ್ನ ಬಗ್ಗೆ ಮಾತನಾಡಿದರೆ ಅದು ಕಾಣಿಸುವುದಿಲ್ಲ. ಅದು ವೀಕ್ಷಕರಿಗೆ ಮಾತ್ರ ಗೊತ್ತಾಗುತ್ತದೆ. ಅಲ್ಲಿನ ವಾತಾವರಣ ಹೇಗಿತ್ತು ಅನ್ನುವುದು ನನಗಿಂತ ವೀಕ್ಷಕರಿಗೆ ಚೆನ್ನಾಗಿ ಗೊತ್ತು.

◆ **ನಿಮ್ಮ ಬಗ್ಗೆ ನಿರೀಕ್ಷೆ ಇಟ್ಟುಕೊಂಡವರಿಗೆ ನಿರಾಸೆಯಾಗಿದೆ. ಏಕೆ ಹೀಗಾಯಿತು?**

ಪರಿಚಿತರು–ಅಪರಿಚಿತರೂ ಸೇರಿ ಅನೇಕರನ್ನು ಈಗ ಭೇಟಿಯಾಗಿದ್ದೇನೆ. ಒಬ್ಬ ಸ್ಪರ್ಧಿಯಾಗಿದ್ದಾಗ ಆ ಕಾರ್ಯಕ್ರಮದ ಬಗ್ಗೆ ಜನಾಭಿಪ್ರಾಯ ಏನು ಅನ್ನುವುದು ಗೊತ್ತಾಗುವುದಿಲ್ಲ. ಜನ ಗೆಲ್ಲಬೇಕಿತ್ತು ಎಂದೇ ಹೇಳುತ್ತಾರೆ. ಅವರ ಅಭಿಪ್ರಾಯದಲ್ಲಿ ಯಾವ ತಪ್ಪೂ ಇಲ್ಲ. ಆದರೆ, ವಾಹಿನಿಯ ದೃಷ್ಟಿಯಿಂದ ಏನು ಫಲಿತಾಂಶವನ್ನು ಪ್ರಕಟಿಸಿದ್ದಾರೆ ಅದನ್ನು ಗೌರವಿಸುತ್ತೇನೆ. ಅವರು ಕೊಟ್ಟ ಅವಕಾಶದಿಂದಲೇ ಇಷ್ಟೆಲ್ಲ ಬೆಳವಣಿಗೆಗೆ ಸಾಧ್ಯ ಆಗಿದೆ ಎನ್ನುವ ಗೌರವವೂ ಇದೆ.

◆ **ನಿಮ್ಮ ವೈಚಾರಿಕ ಪ್ರಶ್ನೆಗಳು ಗೆಲುವಿನ ಹಿನ್ನಡೆಗೆ ಕಾರಣ ಆಯಿತಾ?**

ಸಮಾಜಮುಖಿಯಾಗಿ ಅಲ್ಲಿ ಮಾತನಾಡಿದ್ದು ಉಂಟು. ಅದಕ್ಕೊಂದು ಉದಾ: ನಲ್ಲಿ ನೀರನ್ನು ವಿನಾಕಾರಣ ಖರ್ಚು ಮಾಡುತ್ತಿರುವುದು ನನ್ನ ಅನುಭವಕ್ಕೆ ಬಂತು. ಅದನ್ನು ನಿಲ್ಲಿಸಲು ಹೇಳುತ್ತೇನೆ. ಅದು ನನ್ನ ಕಾಳಜಿ, ಹೊರಗಡೆ ಇದ್ದಾಗಲೂ ಅದನ್ನು ಹೇಳುತ್ತೇನೆ. ಎಲ್ಲಿದ್ದರೂ ಪರಿಸರ–ಕನ್ನಡ ಪರ ದನಿ ಎತ್ತುತ್ತೇನೆ. ಇದೆಲ್ಲ ಸಣ್ಣಪುಟ್ಟ ವಿಚಾರ. ಆದರೂ ಅದನ್ನು ಮಾಡಬೇಕು. ಜನರಿಗೆ ಏನು ಅನ್ನಿಸಿದೆಯೋ ಗೊತ್ತಿಲ್ಲ. ಎಲ್ಲ ವಿಚಾರದಲ್ಲಿ ಸಮಾಜಮುಖಿ ಮತ್ತು ವೈಚಾರಿಕವಾಗಿ ಇರಬೇಕು. ಇದರ ಬಗ್ಗೆ ಯಾವ ಗೊಂದಲವೂ ಇಲ್ಲ.

◆ **ನಿಮ್ಮಲ್ಲಿ ಸಿಟ್ಟು–ಆಕ್ರೋಶ ಕಂಡಿದ್ದವರಿಗೆ ತುಂಬ ಅಚ್ಚರಿ ಮೂಡಿಸಿದ್ದೀರಿ.**

ಮಾನವೀಯತೆಗೆ ಆದ್ಯತೆ ಕೊಡುತ್ತೇನೆ. ನನ್ನ ಶತ್ರುವಿಗೂ ಕೆಟ್ಟದನ್ನು ಬಯಸುವ ವ್ಯಕ್ತಿಯಲ್ಲ. ಆದರೆ ಹೋರಾಟ ಎಂದು ಬಂದಾಗ ನನ್ನ ಕಾಳಜಿ ಇದ್ದೇ ಇರುತ್ತದೆ. ಸಂಜೆ ಮನೆಗೆ ಹೋದಾಗ ನಾನು ಹೇಗಿರುತ್ತೇನೆ ಅನ್ನುವುದನ್ನು ನೋಡಿದ್ದಾರೆ. ಭಾವನೆಗಳಿಗೆ ಗೌರವ ಕೊಡುತ್ತೇನೆ. ವಿಚಾರದಲ್ಲಿ ಯಾವುದೇ ರಾಜಿ ಇಲ್ಲದೆ ಹೋರಾಡುತ್ತೇನೆ. ನಾನೂ ಖುಷಿಯಾಗಿದ್ದು, ಸಹಜೀವಿಗಳನ್ನೂ ಖುಷಿಯಾಗಿ ಇಟ್ಟುಕೊಳ್ಳುವುದು ನನ್ನ ಗುಣ.

■ **ರಾಘವೇಂದ್ರ ಕೆ.**